C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ ನಂ.132/2021

ದಿನಾಂಕಃ 20.09.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:1 ಪಿ. ಡಬ್ಲ್ಯೂ:8

| | |
|---|---|
| ಸಾಕ್ಷಿದಾರರ ಹೆಸರು | ಪೂಜಾ |
| ಗಂಡನ ಹೆಸರು | ಅಕ್ಷಯ್ |
| ವಯಸ್ಸು | 24 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಮಂಡ್ಯ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.6 ಚನ್ನಯ್ಯ ನನಗೆ ಮಾವನಾಗಬೇಕು. ನನ್ನ ಗಂಡ ಅಕ್ಷಯ್ ಜೀವಂತ ಇಲ್ಲ. ಅವರು ತೀರಿಕೊಂಡು ಒಂದು ವರ್ಷದ ಮೇಲೆ ಆಗಿದೆ. ಆ ಸಮಯದಲ್ಲಿ ಮಂಡ್ಯದ ಕಲ್ಲಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆ . ಅಕ್ಷಯ್ ಅವರು R.B.L ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ತೀರಿಹೋದ ದಿನಕ್ಕೆ ನಮ್ಮಿಬ್ಬರ ಮದುವೆಯಾಗಿ 12 ದಿನಗಳು ಆಗಿತ್ತು. ಅಕ್ಷಯ್ ಅವರು ದಿನಾಂಕ 22.06.2021 ರಂದು ಮಧ್ಯಾಹ್ನ 1.00 ಗಂಟೆಗೆ ಮನೆಯಿಂದ ಬ್ಯಾಂಕಿಗೆ ಕೆಲಸಕ್ಕೆ ಹೋದರು. ಮಾಮೂಲಿಯಂತೆ ಅಕ್ಷಯ್ ಅವರುಕೆಲಸ ಮುಗಿಸಿಕೊಂಡು ಸಂಜೆ 7.00 ಗಂಟೆಗೆ ಮನಗೆ ಬರುತ್ತಿದ್ದರು. ಅಕ್ಷಯ್ ರವರು ದಿನಾಂಕ 22.06.2021 ರಂದು ಸಾಯಂಕಾಲ ಮನೆಗೆ ಬರಲಿಲ್ಲ. ಆದರೆ ಆ ದಿವಸ ಸಂಜೆ 6.00 ಗಂಟೆಗೆ ಅಕ್ಷಯ್ ಅವರು ನನಗೆ ಫೋನ್ ಮಾಡಿ, ಹುಷಾರು ಇಲ್ಲದೆ ಇರುವುದರಿಂದ ನಿನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ ರೆಡಿಯಾಗಿರು ಅಂತ ಹೇಳಿದರು , ಸಂಜೆ 6.30 ಗಂಟೆ ಆದರೂ ಅಕ್ಷಯ್ ಅವರು ಮನೆಗೆ ಬರಲಿಲ್ಲ. ಆಗ ಮತ್ತೆ ನಾನು ಸಂಜೆ 6.30 ಗಂಟೆಗೆ ಅಕ್ಷಯ್ ಅವರಿಗೆ ಫೋನ್ ಮಾಡಿದೆನು. ಅದಕ್ಕೆ ಅಕ್ಷಯ್ ಅವರು ಆಫೀಸ್ ನಲ್ಲಿ ಇದ್ದೇನೆ 5 ನಿಮಿಷದಲ್ಲಿ ಬರುವುದಾಗಿ ಹೇಳಿದರು. ಆದರೆ ಬರಲಿಲ್ಲ , ಆದ್ದರಿಂದ

ಮತ್ತೆ ನಾನು ಸಂಜೆ 7.00 ಗಂಟೆಗೆ ಅಕ್ಷಯ್ ಅವರಿಗೆ ಫೋನ್ ಮಾಡಿದೆನು, ಆಗ ಅವರ ಫೋನ್ ಸ್ವಿಚ್ ಆಫ್ ಆಗಿತ್ತು, ಆದ್ದರಿಂದ ಮನೆಯ ಓನರ್ ಗೆ ಹೋಗಿ , ಅಕ್ಷಯ್ ಇನ್ನೂ ಬಂದಿಲ್ಲ ಅಂತ ತಿಳಿಸಿದ್ದೆ. ಆ ದಿವಸ ಇಡೀ ರಾತ್ರಿ ಅಕ್ಷಯ್ ಮನೆಗೆ ಬರಲಿಲ್ಲ. ಮರು ದಿವಸ ನಾನು ಅಕ್ಷಯ್ ಅವರು ಕೆಲಸ ಮಾಡುತ್ತಿದ್ದ ಕಚೇರಿಗೆ ಹೋದೆನು. ಅಕ್ಷಯ್ ಅವರು ಕೆಲಸ ಮುಗಿಸಿಕೊಂಡು ಹಿಂದಿನ ದಿವಸ 5 ಗಂಟೆಗೆ ಹೋಗಿದ್ದಾರೆ ಅಂತ ಗೊತ್ತಾಯಿತು. ಅಕ್ಷಯ್ ಅವರ ಸ್ನೇಹಿತ ಕಿರಣ್ (ಚಾಸಾ.5) ಅವರಿಗೆ ಆಫೀಸಿನಿಂದ ಫೋನ್ ಮಾಡಿಸಿ, ನನ್ನ ಜೊತೆಯಲ್ಲಿ ಮಾತನಾಡಲು ಕೊಟ್ಟರು . ನಾನು ಕಿರಣ್ ಜೊತೆಯಲ್ಲಿ ಫೋನ್ ನಲ್ಲಿ ಮಾತನಾಡಿದೆನು, ನಾನು ಕಿರಣ್ ಜೊತೆ ಫೋನ್ ನಲ್ಲಿ ಮಾತನಾಡಿದಾಗ, ಅವರ ಸಹಾ ಹಿಂದಿನ ದಿವಸ ನಾನು ಅಕ್ಷಯ್ ಗೆ ಫೋನ್ ಮಾಡಿದೆನು , ಫೋನ್ ಸ್ವಿಚ್ ಆಫ್ ಆಗಿತ್ತು ಅಂತ ಹೇಳಿದರು. ನಾನು ಕಿರಣ್ ಅವರನ್ನು ಬರುವಂತೆ ಕರೆದನು. ಕಿರಣ್ ಅವರು ಮದ್ಯಾಹ್ನ 3.00 ಗಂಟೆಗೆ ಬಂದರು. ಫ್ರೆಂಡ್ ಎಲ್ಲಾ ಸೇರಿ ಅಕ್ಷಯ್ ಅವರನ್ನು ಹುಡುಕುತ್ತೇವೆ ಎಂದರು. ಅವತ್ತಿನ ದಿನ ಅಕ್ಷಯ್ ಎಲ್ಲೂ ಸಿಗಲಿಲ್ಲ. ಇದರ ಮಾರನೆಯ ದಿವಸ ನಾನು ಮತ್ತು ಕಿರಣ್ ಪೊಲೀಸ್ ಠಾಣೆಗೆ ಕಂಪ್ಲೆಂಟ್ ಕೊಡೋಣ ಅಂತ ಪೊಲೀಸ್ ಠಾಣೆಗೆ ಹೋಗುತ್ತಿರಬೇಕಾದರೆ , ಸಂಜಯ್ ಸರ್ಕಲ್ ಹತ್ತಿರ ಹೋಗುತ್ತಿದ್ದಾಗ ಜನರು ಸುಂಡಹಳ್ಳಿ ಹತ್ತಿರ ಯಾರೋ ತೀರಿಹೋಗಿದ್ದಾರೆ, ಶವ ಬಿದಿದ್ದೆ ಅಂತ ಮಾತನಾಡಿಕೊಳ್ಳುತ್ತಿದ್ದರು. ನಾವು ಸುಂಡಹಳ್ಳಿಗೆ ಹೋಗಿ ನೋಡಿದಾಗ ಶವ ನನ್ನ ಗಂಡನದಾಗಿತ್ತು .

ನನ್ನ ಗಂಡನ ಶವದ ಎದೆ , ಬೆನ್ನು ಮತ್ತು ಹೊಟ್ಟೆಯ ಮೇಲೆ ಗಾಯಗಳಾಗಿತ್ತು . ಈಗ ನನಗೆ ತೋರಿಸಿದ ನಿಪಿ.8 ಫೋಟೋದಲ್ಲಿ ನನ್ನ ಗಂಡನ ಶವ ಕಾಣಿಸುತ್ತದೆ. ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯು ನಾನು ಪೊಲೀಸರಿಗೆ ಕೊಟ್ಟಿದ್ದ ದೂರು ಆಗಿದ್ದು ಅದನ್ನು ನಿಪಿ.17 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಪೊಲೀಸರು ಸುಮಾರು ಬೆಳಗ್ಗೆ 11.00 ಗಂಟೆ ಹೊತ್ತಿಗೆ ಬಂದಿದ್ದರು. ಹೇಳಿಕೆಗಳನ್ನು ತೆಗೆದುಕೊಂಡರು. ಆ ಸಮಯದಲ್ಲಿ ಚಾಸಾ.5 ಕಿರಣ್ ಹಾಗೂ ಅಕ್ಕಪಕ್ಕದವರು ಇದ್ದರು. ನನಗೆ ತೋರಿಸಿದ ನಿಪಿ.2 ಮತ್ತು ನಿಪಿ.3 ಫೋಟೋದಲ್ಲಿ ಇರುವ ಸ್ಥಳವು ನನ್ನ ಗಂಡನ ಶವ ಬಿದಿದ್ದ ಸ್ಥಳವಾಗಿರುತ್ತದೆ. ಪೊಲೀಸರು ಸ್ಥಳದಲ್ಲಿ ನಿಪಿ.4 ರಂತೆ ಮಹಜರ್ ಮಾಡಿ ನನ್ನ ಸಹಿಯನ್ನು ಹಾಕಿಸಿಕೊಂಡರು. ಬೇರೆ ಯಾರು ಮಹಜರ್ ಗೆ ಸಹಿ ಮಾಡಿರಲಿಲ್ಲ. ನನ್ನ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ನಿಪಿ.2 ಫೋಟೋದಲ್ಲಿ, ನನ್ನ ಗಂಡನ ಶವ ಬಿದಿದ್ದ ಜಾಗವನ್ನು ತೋರಿಸುತ್ತಿದ್ದಾರೆ, ನಿಪಿ.3 ಫೋಟೋದಲ್ಲಿ ನನ್ನ ಗಂಡನ ಶವ ಬಿದಿದ್ದ ಜಾಗ ಕಾಣಿಸುತ್ತಿದೆ.

ದಿನಾಂಕ 22 ರಂದು ನನ್ನ ಗಂಡ ಅಕ್ಷಯ್ ಮನೆಯಿಂದ ಆಚೆ ಹೋಗುವಾಗ ಅವರು ಹಾಕಿಕೊಂಡಿದ್ದ ಬಟ್ಟೆಗಳ ನೆನಪಿದೆ. ಆ ಬಟ್ಟೆಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆಕೆಯ ಗಂಡ ಅಕ್ಷಯ್ ಅವರು ಧರಿಸಿಕೊಂಡಿದ್ದ ಮು.ಮಾ.8 ಶರ್ಟನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ಮು.ಮಾ.9 ರಕ್ತದ ಕಲೆ ಇರುವ ನೀಲಿ ಬಣ್ಣದ ಬನಿಯನ್ ಅನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.10 ಕಾಟನ್ ಜೀನ್ಸ್ ಪ್ಯಾಂಟನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.11 ಅಂಡರ್ ವೇರನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.12 ಕಪ್ಪು ಬಣ್ಣದ ಬೆಲ್ಟನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.13 ಕೀ ಬಂಚನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.14 ಸ್ಮಾರ್ಟ್ ವಾಚನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.15 ಚಪ್ಪಲಿಗಳನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.16 ಕೈ ಕಡಗವನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.17 ಕಿವಿಯ ಲೋಹದ ರಿಂಗುಗನ್ನು ನೋಡಿ ಗುರುತಿಸಿದ್ದಾರೆ.

ಪೊಲೀಸರು ಶವ ಬಿದಿದ್ದ ಸ್ಥಳದಿಂದ ಏನನ್ನು ತೆಗೆದುಕೊಳ್ಳಲಿಲ್ಲ. ನನ್ನ ಗಂಡನನ್ನು ಕೊಲೆ ಮಾಡಿದ್ದರು. ಸ್ಥಳದಲ್ಲಿ ಡ್ರಿಂಕ್ಸ್ ಪ್ಯಾಕೇಟ್ ಇತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.4 ಮತುತ 5 ಡ್ರಿಂಕ್ಸ್ ಪ್ಯಾಕೇಟನ್ನು ನೋಡಿ ಗುರುತಿಸಿದ್ದಾರೆ. ನನ್ನ ಗಂಡನಿಗೆ ಚಾಕುವಿನಿಂದ ಗಾಯ ಮಾಡಿದ್ದರು, ಬಾಟಲ್ ನಿಂದ ತಲೆಗೆ ಹೊಡೆದಿದ್ದರು. ಪೊಲೀಸರು ತಲಾಶೆ ಮಾಡಿ ಕಲ್ಲುಗಳನ್ನು ಎತ್ತುಕೊಂಡರು. ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.2 ಮತ್ತು 3 ಕಲ್ಲುಗಳನ್ನು ನೋಡಿ ಗುರುತಿಸಿದ್ದಾರೆ. ನೆಲದ ಮೇಲೆ ರಕ್ತ ಬಿದ್ದಿತ್ತು. ಪೊಲೀಸರು ರಕ್ತ ಬಿದಿದ್ದ ಸ್ಥಳದ ಫೋಟೋವನ್ನು ತೆಗೆದುಕೊಂಡರು. ಪೊಲೀಸರು ಸಾದಾ ಮಣ್ಣು ಮತ್ತು ರಕ್ತ ಸಿಕ್ತವಾಗಿದ್ದ ಮಣ್ಣನ್ನು ತೆಗೆದುಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.6 ರಕ್ತಸಿಕ್ತ ಮಣ್ಣನ್ನು ಹಾಗೂ ಮು.ಮಾ.7 ಸಾದಾ ಮಣ್ಣನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನಿಪಿ.6, ನಿಪಿ.8 , ನಿಪಿ.9 , ಪಿ.10, ಪಿ.11, ಪಿ.12, ಪಿ.13 ಫೋಟೋದಲ್ಲಿ ಇರುವ ಶವವನ್ನು ನೋಡಿ, ಅದರ ಮೇಲೆ ಇರುವ ಗಾಯಗಳನ್ನು ನೋಡಿ

ಗುರುತಿಸಿದ್ದಾರೆ. ನಂತರ ಪೂಲೀಸರು ಶವವನ್ನು ಪೋಸ್ಟ ಮಾಟಂ ಗಾಗಿ ಮಂಡ್ಯ ಆಸ್ಪತ್ರೆಗೆ ತೆಗೆದುಕೊಂಡು ಹೋದರು.

ನಂತರ ಮಂಜು ಎಂಬುವರು ನನ್ನ ಗಂಡನನ್ನು ಕೊಲೆ ಮಾಡಿರುವುದಾಗಿ ತಿಳಿಯಿತು. ಸದರಿ ಮಂಜುವನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ನನಗೆ ಆರೋಪಿ ಮಂಜು ಗೊತ್ತಿದ್ದಾರೆ. ಅಕ್ಟೋಬರ್ 2021 ನೇ ಇಸವಿಯಿಂದ ಆರೋಪಿ ಮಂಜು ನನಗೆ ಗೊತ್ತಿದ್ದಾರೆ. ಮೊಬೈಲ್ ಟಿಕ್ ಟಾಕ್ ಮೂಲಕ ಮಂಜು ಅವರ ಪರಿಚಯ ಆಗಿತ್ತು. ಮೃತ ನನ್ನ ಗಂಡ ಅಕ್ಷಯ್ ನನ್ನ ಸೋದರತ್ತೆಯ ಮಗ. ನಾನು ಮತ್ತು ಅಕ್ಷಯ್ ಪ್ರೀತಿಸಿ ಮದುವೆಯಾಗಿದ್ದೆವು, ನಮ್ಮ ಕುಟುಂಬದ ಸಮ್ಮತಿ ಇರಲಿಲ್ಲ. ಆರೋಪಿ ಮಂಜು ಅವರ ಪರಿಚಯ ಆಗುವುದಕ್ಕಿಂತ ಮುಂಚಿನಿಂದಲೂ ನಾನು ಅಕ್ಷಯ್ ಅವರನ್ನು ಪ್ರೀತಿಸುತ್ತಿದ್ದೆ. ನನಗೂ ಮತ್ತು ಆರೋಪಿ ಮಂಜು ನಡುವೆ ಸ್ನೇಹ ಇದ್ದು ನಾನು ಅವರಿಗೆ ಮೆಸೇಜನ್ನು ಮಾಡುತ್ತಿದ್ದೆನು. ಆರೋಪಿ ಮಂಜು ನನ್ನೊಂದಿಗೆ ಮಾತನಾಡುವಾಗ ವಿಡೀಯೋ ಕಾಲ್ ಮಾಡುತ್ತಿದ್ದರು. ಅಕ್ಷಯ್ ಅನ್ನು ನಾನು ಮದುವೆಯಾಗಿದ್ದೇನೆ ಅಂತ ಗೊತ್ತಾದ ಮೇಲೆ, ಆರೋಪಿ ಮಂಜು ನನ್ನ ಜೊತೆ ಬಂದು ಬಿಡು ಅಂತ ಒತ್ತಾಯ ಮಾಡುತ್ತಿದ್ದನು. ಗಂಡನನ್ನು ಬಿಟ್ಟು ನಾನು ಬರಲ್ಲ ಅಂತ ಹೇಳುತ್ತಿದ್ದೆನು. ಆರೋಪಿ ಮಂಜು, ನಾನು ಮೈಸೂರಿನಲ್ಲಿ ಇರುವುದರಿಂದ, ನೀನು ಮೈಸೂರಿಗೆ ಬಂದು ಇದ್ದು ಬಿಡು ಅಂತ ಹೇಳುತ್ತಿದ್ದನು. ನನ್ನ ಗಂಡನಿಗೂ ಹಾಗೂ ಆರೋಪಿ ಮಂಜುಗೂ ಪರಿಚಯವಿತ್ತು. ನನ್ನ ಗಂಡ ಆರೋಪಿಯಿಂದ ರೂ.5,000/- ಸಾಲ ಮಾಡಿಕೊಂಡಿದ್ದರು. ಆರೋಪಿ ದಿನಾಂಕ 22 ರಂದು ಮಧ್ಯಾಹ್ನ 12.30 ಗಂಟೆಯಲ್ಲಿ ನನಗೆ ಫೋನ್ ಮಾಡಿ , ನನ್ನ ಗಂಡನಿಗೆ ಮದುವೆಯಾಗಿದೆಯಲ್ಲಾ ಪಾರ್ಟಿ ಕೊಡಿಸು ಅಂತ ನನ್ನ ಗಂಡನಿಗೆ ಕೇಳಿದರು. ನಾನು ಆರೋಪಿಗೆ ಪಾರ್ಟಿ ಯಾಕೆ ಕೇಳುತ್ತೀಯಾ ಅಂತ ಬೈದೆ. ದಿನಾಂಕ 22 ರಂದು ನಾನು , ನನ್ನ ಗಂಡ ಮನೆಗೆ ಬಾರದೆ ಇದ್ದುದರಿಂದ ಸಂಜೆ 7.30 ಗಂಟೆಗೆ ಆರೋಪಿಗೆ ಫೋನ್ ಮಾಡಿ, ನನ್ನ ಗಂಡ ನಿನ್ನ ಜೊತೆಯಲ್ಲಿ ಇದ್ದಾರಾ, ಪಾರ್ಟಿ ಕೊಡಿಸುತ್ತೇನೆ ಅಂತ ಹೇಳಿದೆಯಲ್ಲಾ ಅಂತ ಕೇಳಿದೆನು. ಆರೋಪಿ ಫೋನನ್ನು ಕಟ್ ಮಾಡಿದನು. ನಾನು ಮತ್ತೆ ಆರೋಪಿಗೆ ಫೋನ್ ಮಾಡಿದೆನು, ಆರೋಪಿ ಫೋನ್ ತೆಗೆಯಲಿಲ್ಲ. ಮರುದಿನ ಮತ್ತೆ ಆರೋಪಿಗೆ ಫೋನ್ ಮಾಡಿ ಅಕ್ಷಯ್ ಬಂದಿಲ್ಲ, ಪಾರ್ಟಿಗೆ ಕರೆದುಕೊಂಡು ಹೋಗಿದ್ರ ಅಂತ ಕೇಳಿದೆನು. ಮಂಡ್ಯ ಎಂದರೆ ನನಗೆ ಗೊತ್ತಿಲ್ಲ, ನಾನು ಮೈಸೂರಿನಲ್ಲಿ ಇದ್ದೇನೆ ಅಂತ ಆರೋಪಿ ಹೇಳಿದನು. ಸುಮಾರು 3 ದಿನ ಆದ ಮೇಲೆ , ಪೊಲೀಸರು ಆರೋಪಿ ಮಂಜುವನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದರು.

ಆಗ ಆರೋಪಿಯೇ ನನ್ನ ಗಂಡನನ್ನು ಕೊಲೆ ಮಾಡಿದ್ದಾಗಿ ಗೊತ್ತಾಯಿತು. ನಾನು ಪೊಲೀಸರಿಗೆ, ಆರೋಪಿ ನನಗೆ ವಿಡೀಯೊೀ ಕಾಲ್ ಮಾಡಿದ ವಿಚಾರವನ್ನು ಹೇಳಿದ್ದೇನೆ. ನಾನು ಅಕ್ಷಯ್ ನನ್ನು ಪ್ರೀತಿಸುತ್ತಿದ್ದ ವಿಚಾರ ಆರೋಪಿ ಮಂಜುಗೆ ಗೊತ್ತಿರಲಿಲ್ಲ. ಆರೆಪೀಪಿ ನಿನ್ನನ್ನು ಬಿಟ್ಟು ಇರಲು ಆಗುವುದಿಲ್ಲ, ನೀನು ಏನಾದರು ಮೆಸೇಜ್ ವಿಡೀಯೊೀ ಕಾಲ್ ಮಾಡದೇ ಇದ್ದರೆ ನಾನು ಸತ್ತು ಹೋಗುತ್ತೇನೆ ಅಂತ ಹೇಳುತ್ತಿದ್ದನು. ಆರೋಪಿ ಸತ್ತು ಹೋದರೆ, ಚೀಟಿಯಲ್ಲಿ ನನ್ನ ಹೆಸರನ್ನು ಬರೆದು ಇಡುತ್ತಾನೆ ಅಂತ ಭಯ ಪಟ್ಟುಕೊಂಡು ನಾನು ಆರೋಪಿಯೊಂದಿಗೆ ಮಾತನಾಡುತ್ತಿದ್ದೆನು.

<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಎನ್.ಆರ್.ಕೆ. ವಕೀಲರು ಸಮಯವನ್ನು ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.